ತೋಳದ ಬಾಯಲ್ಲಿ ಸಿಕ್ಕಿಕೊಂಡಿದ್ದ ಕುರಿ ಮರಿ ಬಹಳ ಜಾಣತನವನ್ನು ಉಪಯೋಗಿಸಿತು. ‘ತೋಳಣ್ಣ... ತೋಳಣ್ಣ... ನೀನೇನೂ ಭಯ ಪಡಬೇಡಣ್ಣ. ಇದು ನಿಮ್ಮ ಕುರಿಮರಿಯಲ್ಲ, ನನ್ನದು ಎಂದು ಹೇಳು. ಜನರು ಸುಮ್ಮನಾಗಿ ಬಿಡುತ್ತಾರೆ’ ಎಂದಿತು. ಇದನ್ನು ಕೇಳಿ ಖುಷಿಗೊಂಡ ತೋಳ ‘ಇದು ನಿಮ್ಮ ಕುರಿಮರಿಯಲ್ಲ ನನ್ನದು...’ ಎನ್ನುವಷ್ಟರಲ್ಲಿ ತೋಳದ ಬಾಯಿಂದ ದೊಪ್ಪನೇ ಕೆಳಕ್ಕೆ ಬಿದ್ದ, ಕುರಿಮರಿ ‘ಸದ್ಯ ತೋಳದ ಬಾಯಿಂದ ತಪ್ಪಿಸಿಕೊಂಡೆ. ನನ್ನ ಜೀವ ಉಳಿಯಿತು...’ ಎನ್ನುತ್ತಾ ಚೆಂಗನೆ ನೆಗೆದು ವೇಗವಾಗಿ ಓಡುತ್ತಾ ‘ಎಲೈ ದೂರ್ತ ತೋಳವೇ, ನಾನು ನಿನ್ನವನಲ್ಲ. ಅವರವನು... ಅಲ್ಲಿ ಸಂಗೀತ ಹಾಡುತ್ತಲೇ ನಮ್ಮ ಕುರಿಮಂದೆಯನ್ನು ಸಾಕಿ ಸಲಹುತ್ತಿರುವ ಆ ಕುರಿಗಾಯಿ ನನ್ನ ಯಜಮಾನ’ ಎಂದು ಹೇಳಿ ಕುರಿಗಾಯಿಯ ಹಟ್ಟಿ ಸೇರಿಕೊಂಡಿತು. ಅಲ್ಲಿ ಆತಂಕಗೊಂಡಿದ್ದ ತನ್ನ ಬಳಗದ ಕುರಿಗಳಿಗೆಲ್ಲಾ, ತೋಳದ ಬಾಯಿಗೆ ಸಿಕ್ಕಿಯೂ ತಾನು ಪ್ರಾಣಕಳೆದುಕೊಳ್ಳದೆ ತೋಳಕ್ಕೆ ಚಳ್ಳೆಹಣ್ಣು ತಿನ್ನಿಸಿ ಅದರಿಂದ ತಾನು ಪಾರಾಗಿ ಬಂದ ಸಾಹಸವನ್ನು ಕುರಿಮರಿಯು ಹೆಮ್ಮೆಯಿಂದ ಹೇಳಿತು. ಆಪತ್ತು ಬಂದಾಗ ಧೈರ್ಯ ಕಳೆದುಕೊಳ್ಳದೆ ತನ್ನಂತೆ ಉಪಾಯದಿಂದ ಪಾರಾಗಬೇಕೆಂದೂ, ಹಾಗೂ ಇನ್ನು ಮುಂದೆ ಎಲ್ಲರೂ ಎಚ್ಚರಿಕೆಯಿಂದ ಇರುವಂತೆ ಕುರಿಮರಿಯು ತನ್ನ ಬಳಗದ ಎಲ್ಲಾ ಕುರಿಗಳಿಗೂ ಸಲಹೆಯನ್ನು ನೀಡಿತು.

ಕುರಿ ಮರಿಯ ಸಾಹಸದ ಕಥೆ ಕೇಳಿ ಎಲ್ಲ ಕುರಿಗಳೂ ಸಂತಸದಿಂದ ಕುಣಿದಾಡಿದವು. ಅತ್ತ ಹೀಗೆ ಕುರಿಗಳೆಲ್ಲ ಸಂಭ್ರಮ ಪಡುತ್ತಿದ್ದರೆ ಇತ್ತ ತೋಳ ಇಂಗು ತಿಂದ ಮಂಗನಂತಾಗಿ ಬಂದ ದಾರಿಗೆ ಸುಂಕವಿಲ್ಲದಂತೆ ಕಾಡಿನತ್ತ ಹೊರಟಿತು. ‘ಬಾಯಿಗೆ ಬಂದ ತುತ್ತು ಹೊಟ್ಟೆಗೆ ಹೋಗಲಿಲ್ಲವಲ್ಲ’ ಎಂದು ಕುರಿ ಮರಿಯನ್ನು ತಾನು ತಿನ್ನಲಾರದೇ ಹೋದದ್ದಕ್ಕೆ ತೋಳ ತನ್ನ ಬಾಯಿಯನ್ನು ತಾನೇ ರಪರಪನೆ ಬಡಿದುಕೊಂಡು ‘ಎಂತಹ ಬಾಯಿ ನೀನು? ಒಂದು ಗಳಿಗೆ ನೀನು ಮಾತನಾಡದೆ ಸುಮ್ಮನಿದ್ದಿದ್ದರೆ ಇಷ್ಟೊತ್ತಿಗೆ ನನ್ನ ಹೊಟ್ಟೆಗೆ ಕುರಿಮರಿ ಸೇರಿ ಬಿಡುತ್ತಿತ್ತು. ನಿನ್ನ ಅವಿವೇಕತನದಿಂದ ಕುರಿಮರಿ ತಿನ್ನುವ ಬದಲು ಮಣ್ಣು ತಿನ್ನುವಂತಾಗಿದೆ’ ಎಂದು ತನ್ನ ಬಾಯಿಯನ್ನು ತಾನೇ ದಾರಿಯುದ್ದಕ್ಕೂ ಬೈದುಕೊಳ್ಳುತ್ತಾ ನಿರಾಶೆಯಿಂದ ಕಾಡು ಸೇರಿತು. ಮತ್ತೆ ಕುರಿಗಾಯಿಯ ಹಟ್ಟಿಯ ಕುರಿಗಳನ್ನು ನೋಡಿ ಬಾಯಿಯಲ್ಲಿ ಜೊಲ್ಲು ಸುರಿಸುವ ಪಾಡೇ ತೋಳಕ್ಕೆ ಗತಿಯಾಯಿತು.

■ ಬನ್ನೂರು ಕೆ. ರಾಜು




# ಟೊಂಗಿ ಮ್ಯಾಲ

ಗಿಡದ ಟೊಂಗಿ ಮ್ಯಾಲ ಎಷ್ಟು ಚಂದ
ಕುಂತಾವ ಹತ್ತಾರ ಹಸರ ಗಿಳಿ
ಟೊಂಗಿ ಟೊಂಗ್ಯಾಗ ಸಾಲು ಸಾಲಾಗಿ
ಮೂಡಿದಂಗ ಹಸರ ಎಲಿ

ಯಾವ ಚಿತ್ರಗಾರ ಬಳಿದನವಕೆ ಬಣ್ಣ
ಅತ್ತ ಸೆಳೆಯುವಂತೆ ಕಣ್ಣ
ಕೆಂಪು ಕೊಕ್ಕಿನಲಿ ಕುಕ್ಕಿ ತಿನಲು ಅವಕೆ
ಬೇಕಣ್ಣ ರುಚಿಯಾದ ಹಣ್ಣ

ದೇವಲೋಕದಿಂದ ಧರೆಗಿಳಿಸಿ ಸ್ವರ್ಗ
ತಂದ್ವಾಂಗ ಕಾಣತಾವ ಶುಕ
ನೋಡಿದರಿನ್ನಷ್ಟು ನೋಡುವಂಗ ಮಾಡಿ
ತಣಿಸತಾವ ಕಂಗಳ ಸುಖ

ರಂಗು ರಂಗಾಗಿ ಗುಂಗು ಹಿಡಿಸುತಲಿ
ದಂಗು ಬಡಿಸ್ಯಾವ ಗಿಡಕ
ಹಾದಿ ಬೀದೀಲಿ ಹೋಗುವವರನ್ನು
ಕರೆದು ನಿಲಸ್ಯಾವ ಬುಡಕ

ಗಿಡದ ಟೊಂಗಿ ಮ್ಯಾಲ ಎಷ್ಟು ಚಂದ
ಕುಂತಾವ ಅಲ್ಲಿ ಹಸರ ಗಿಳಿ
ಟೊಂಗಿ ಟೊಂಗ್ಯಾಗ ಸಾಲು ಸಾಲಾಗಿ
ಮೂಡಿದಂಗ ಹಸರ ಎಲಿ

■ ಸೋಮಲಿಂಗ ಬೇಡರ ಆಳೂರ